


## ಸಂತ ಅನ್ನಮ್ಮ ಕುಟುಂಬ

# ಪುನೀತ ಮರಿಯ ರಾಫೋಲ್ಸ್



ದೇವರ ಪ್ರೀತಿಯನ್ನು, ಕರುಣೆಯನ್ನು, ನಿಸ್ವಾರ್ಥ ಮಾತೃಪ್ರೇಮವಾಗಿ
ಮಾರ್ಪಡಿಸಿದ ತ್ಯಾಗದ ಶಿಲ್ಪಿ.

ದೈವತ್ವವನ್ನು ವ್ಯಕ್ತಪಡಿಸುವುದೇ ಮಾನವನ ಶ್ರೇಷ್ಠತೆಯೆಂದು
ಜೀವಿಸಿ ತೋರಿಸಿದ ಮಹಾತಾಯಿ.

ಅರ್ಪಣೆ ಎಂದರೆ ಪರರ ದುಃಖವನ್ನು ಅಳಿಸಲು ತನ್ನನ್ನೇ
ಮುಡಿಪಿಡುವುದರಲ್ಲಿ ದೇವಪುತ್ರ ಯೇಸುವಿನ ಮುಖಕಮಲವು
ಅರಳುವುದನ್ನು ಕಂಡ ಸೇವೆಯ ಮಾತೆ.

ಸಂತ ಅನ್ನಮ್ಮನವರ ಪರವಾತ್ಸಲ್ಯ ಸಭೆಗೆ ಆತ್ಮೀಕ ಹಾಲುಣಿಸಿ,
ಪರಸೇವಾ ಜೀವನಕ್ಕೆ ನಾಂದಿ ಹಾಡಿದ ಮಹಾತಾಯಿ.

## ಧರ್ಮಗುರು ಜೊನ್ ಬೊನಾಲ್



ದೈವಪ್ರೀತಿಯನ್ನೇ ತನ್ನದಾಗಿಸಿ, ಮಾನವ ನೋವುಗಳ ನಿವಾರಿಸಲು ದೈವೀಶಕ್ತಿಯನ್ನು ಪಡೆದಾತ.

ಮಾನವನನ್ನು ಪ್ರೀತಿಸಲು ತನ್ನ ಸಂಪೂರ್ಣ ಜೀವಿತವನ್ನೇ ಮುಡಿಪಾಗಿಟ್ಟ ಪಾವನ ತಂದೆ.

ಪರರ ದುಃಖವನ್ನು ತನ್ನದಾಗಿಸಿ, ಅವರೊಂದಿಗೆ ತನ್ನನ್ನು ಗುರುತಿಸಿ, ನೋವ ನಿವಾರಿಸಲು ದಾರಿ ಹುಡುಕಿದ ಮಾನವ ಅಭಿಮಾನಿ.

ಸಂತ ಅನ್ನಮ್ಮನವರ ಪರವಾತ್ಸಲ್ಯ ಸಭೆಯ ಮೂಲಬೇರು.
ಸಂತ ಅನ್ನಮ್ಮ ಕುಟುಂಬದ ಬೀಜ ಬಿತ್ತಿದ ಮಹಾತ್ಮನೀತ.



# ಸಂತ ಅನ್ನಮ್ಮ ಕುಟುಂಬದ ಮೂಲ ದಾಖಲೆ



ಸಂತ ಅನ್ನಮ್ಮನವರೇ, ನಮಗಾಗಿ ಪ್ರಾರ್ಥಿಸಿರಿ

## 11. ಗ್ರಂಥಸೂಚಿ


- ಪವಿತ್ರ ಗ್ರಂಥ
- **VC – Vita Consecrata**
- ಆತಿಥ್ಯದ ಹೊಸವಿಧಾನಗಳು: ಉನ್ನತ ಸಮಾವೇಶ 2007ರ ತಯಾರಿ ಗ್ರಂಥ
- 2007ರ XXVI ನೇ ಉನ್ನತ ಸಮಾವೇಶದಲ್ಲಿ ರಚಿತಗೊಂಡ ಖಚಿತ ಗ್ರಂಥ
- ಸಂತ ಅನ್ನಮ್ಮನವರ ಪರವಾತ್ಸಲ್ಯ ಭಗಿನಿಯರ ಸಭೆಯ 2011ರ ಸಂವಿದಾನ ಮತ್ತು ಖಾಯಿದೆಗಳು
- 2013ರ XXVIII ನೇ ಉನ್ನತ ಸಮಾವೇಶದ ನಡವಳಿಕೆಗಳ ಸಾರಾಂಶ
- 2013ರ XXVIII ನೇ ಉನ್ನತ ಸಮಾವೇಶದ ಸಮಾರೋಪಗಳು.

ತೆಗೆದುಕೊಳ್ಳುವ ಸಹೋದರಿಯರು. ಇದು ಚುನಾವಣೆಯಾಗಿರಬಹುದು (ಪ್ರಾಂತ್ಯ/ನಿಯೋಗದ ಆಡಳಿತ ಚುನಾವಣೆಗಾಗಿ) ಅಥವಾ ಉನ್ನತ ಸಭೆಯಲ್ಲಿ ಚರ್ಚಿಸಲ್ಪಡುವ ವಿಷಯಗಳ ಅಧ್ಯಯನವಾಗಿರಬಹುದು. ಕೆಲ ನಿಶ್ಚಿತ ನಿದರ್ಶನಗಳಲ್ಲಿ ಸಂತ ಅನ್ನಮ್ಮ ಕುಟುಂಬದ ಶ್ರೀಸಾಮಾನ್ಯರೂ ಆಯ್ದ ಕೆಲವು ಅಧಿವೇಶನಗಳಲ್ಲಿ ಭಾಗವಹಿಸಬಹುದು.

22. **ಒಟ್ಟಾಗಿ ಸೇರಿ ಮಾಡುವ ದೈವೀಕಾರ್ಯಗಳು:** ಧರ್ಮಭಗಿನಿಯರು ಮತ್ತು ಶ್ರೀಸಾಮಾನ್ಯರು ಒಂದಾಗಿ ತಮ್ಮ ಜೀವನಧ್ಯೇಯದ ಗುರುತಿನಿಂದ ಜೀವಿಸಿ ಮಾಡುವ ಕೆಲಸಗಳು.
23. **ಆಧ್ಯಾತ್ಮಿಕತೆ:** ಒಬ್ಬ ವ್ಯಕ್ತಿ ಅಥವಾ ಗುಂಪಿನ ಆಧ್ಯಾತ್ಮಿಕ (ಆಂತರಿಕ) ಜೀವನ ಸಂರಚನೆಯ ತತ್ವಗಳು ಅಥವಾ ವರ್ತನೆ.
24. **ಉದ್ಯಮ:** ನಮ್ಮ ಧ್ಯೇಯವನ್ನು ನಿರ್ದಿಷ್ಟವಾಗಿಸುವ ಚಟುವಟಿಕೆಗಳು, ಕೆಲಸಗಳು ಅಥವಾ ಸೇವೆಗಳು.
25. **ದೈವಕರೆ:** ಒಂದು ನಿರ್ದಿಷ್ಟ ರೀತಿಯ ಜೀವನಶೈಲಿಯಲ್ಲಿ ಜೀವಿಸಲು ದೇವರು ನಮಗೆ ನೀಡುವ ಪ್ರೇರಣೆ. ಇದನ್ನು ನಾವು ಮನವಿ ಅಥವಾ ಆಹ್ವಾನವೆಂದಾಗಿ ಸ್ವೀಕರಿಸಬಹುದು.

# 10. ಸಂಕ್ಷೇಪಾಕ್ಷರಗಳು

- ಪೇತ್ರ: ಸಂತ ಪೇತ್ರರು ಬರೆದ ಮೊದಲ ಪತ್ರ.
- ಸಂವಿ: ಸಂವಿಧಾನ.
- **VC – Vita Consecrata**



# ವಿಷಯ

1. ಮುನ್ನುಡಿ
2. ಅಡಿಪಾಯ
3. ಸಂತ ಅನ್ನಮ್ಮ ಕುಟುಂಬದ ವ್ಯಾಖ್ಯಾನ
4. ಗುರುತಿಸುವ ಲಕ್ಷಣಗಳು
5. ಸಹಜೀವನದ ಮಾನದಂಡಗಳು
6. ಭಾಗವಹಿಸುವ ಹಾದಿಗಳು
7. ಬದ್ಧತೆಯ ಮಾರ್ಗಗಳು
8. ಸಂಸ್ಥೆ
    - 8.1 ರಚನೆ
    - 8.2 ಜವಾಬ್ದಾರಿಗಳ ಹಂಚಿಕೆ
    - 8.3 ಕಾರ್ಯಾಚರಣೆಯ ಲಕ್ಷಣಗಳು
    - 8.4 ಸಂಬಂಧ ಮತ್ತು ಸಂವಹನದ ಸಂಪರ್ಕದಾರಿ
9. ಕ್ಲಿಷ್ಟಪದಕೋಶ
10. ಸಂಕ್ಷೇಪಾಕ್ಷರಗಳು
11. ಗ್ರಂಥಸೂಚಿ

14. **ವೈದ್ಯಕೀಯ ಶಿಬಿರ:** ಸ್ವಪ್ರೇರಣೆಯಿಂದ ಮುಂದೆ ಬಂದು ಒಂದು ಸಮುದಾಯಕ್ಕೆ ಆರೋಗ್ಯಸೇವಾ ಸಹಾಯವನ್ನು ನೀಡುವ ವೈದ್ಯಕೀಯ ತಜ್ಞರ ತಂಡ.
15. **ಸೇವಾಕೆಲಸ:** ಸಂತ ಅನ್ನಮ್ಮ ಕುಟುಂಬದ ಸದಸ್ಯರಿಗೆ ಕೊಡುಗೆಯಾಗಿ ನೀಡಲ್ಪಟ್ಟಿರುವ ವರದಾನದ ಮೂಲಕ ದೇವರ ಪ್ರೀತಿಗೆ ಸಾಕ್ಷಿಗಳಾಗಿ ತಮ್ಮ ಕೆಲಸಗಳನ್ನು ತಮ್ಮ ಪ್ರಸನ್ನತೆಯ ಮೂಲಕ ಮಾಡುವುದು.
16. **ಸೇವಾಕಾರ್ಯಾಗಾರ:** ದೇವರ ವಾಕ್ಯವನ್ನು ಸಾರುವ ಸಲುವಾಗಿಯೇ ಪಟ್ಟಣಗಳಿಂದ ದೂರವಿರುವ ಹಳ್ಳಿಗಳಲ್ಲಿ ಸಂತ ಅನ್ನಮ್ಮ ಕುಟುಂಬದ ಸದಸ್ಯರು ವಿಶೇಷ ಆರಾಧನಾ ಕಾಲಗಳಲ್ಲಿ ನಡೆಸುವ ಚಟುವಟಿಕೆಗಳು.
17. **ಹೊಸ ರೀತಿಯ ಬಡತನ:** ತಾಂತ್ರಿಕತೆಯ ಅಭಿವೃದ್ಧಿ, ಜಾಗತೀಕರಣ, ಸಾಮಾಜಿಕ ಅಸಮತೋಲನ, ರಾಜಕೀಯ ಘರ್ಷಣೆಗಳು, ಸಂಸ್ಕೃತಿ, ಧಾರ್ಮಿಕ ಮೂಲಭೂತವಾದ ಮತ್ತು ಇತರ ಪರಿಸ್ಥಿತಿಗಳಿಂದಾಗಿ ಜನರು ಅನುಭವಿಸುವ ಬವಣೆಗಳು ಮತ್ತು ಹೋರಾಟ.
18. **ದೇವ ಸೇವಾಕಾರ್ಯ:** ಧರ್ಮಸಭೆಯ ಕೆಲಸ (ಧಾರ್ಮಿಕ, ಪ್ರವಾದನೀಯ, ಮಾನವಸೇವೆ)ಗಳಲ್ಲಿ ಗುರುತಿಸಲಾದ ಕ್ರಿಸ್ತ ಸೇವೆ.
19. **ಬಡತನ:** ಹಣಕಾಸು, ಬುದ್ಧಿಶಕ್ತಿ, ಸಾಮಾಜಿಕ ಸ್ಥಾನಮಾನ, ಆರೋಗ್ಯ, ಕೌಶಲ್ಯ, ಮುಂತಾದುವುಗಳಿಂದ ಯಾವುದೇ ರೀತಿಯಲ್ಲಿ ವಂಚಿತಗೊಂಡಿರುವ ಪ್ರತೀ ವ್ಯಕ್ತಿ.
20. **ಪ್ರಾಂತ್ಯ/ನಿಯೋಗ:** ಸಭೆಯ ಬೌಗೋಳಿಕ ಉಪವಿಭಾಗಗಳು. ಪ್ರಾಂತ್ಯವು ತನ್ನಲ್ಲಿರುವ ಹೆಚ್ಚು ಸಂಖ್ಯೆಯ ಸದಸ್ಯರು ಮತ್ತು ಕನ್ಯಾಮಠಗಳಿಂದ, ನಿಯೋಗಕ್ಕಿಂತ ಭಿನ್ನವಾಗಿದೆ.
21. **ಪ್ರಾಂತೀಯ/ನಿಯೋಗ ಸಮಾವೇಶ:** ಪ್ರಾಂತ್ಯದ ಎಲ್ಲೆಡೆಯಿಂದ ಪ್ರತಿನಿಧಿಗಳಾಗಿ ಆಗಮಿಸಿ, ಸಭೆನಡೆಸಿ, ಮುನ್ನಡೆಗಾಗಿ ಒಮ್ಮತದ ತೀರ್ಮಾನ

6. **ರಚನೆ:** ಒಬ್ಬ ವ್ಯಕ್ತಿಯು ಜೀವನದ ಎಲ್ಲಾ ಆಯಾಮಗಳಲ್ಲೂ ಬೆಳೆಯಲು ಸಹಾಯಕವಾದ ಜ್ಞಾನಸಾಧನೆ, ಅನುಭವ ಮತ್ತು ವರ್ತನೆಗೆ ಪೂರಕವಾದ ಚಟುವಟಿಕೆ.
7. **ಉನ್ನತ ಸಭೆ/ಸಮಾವೇಶ/ಅಧಿವೇಶನ:** ಧಾರ್ಮಿಕ ಸಭೆಯ ಎಲ್ಲೆಡೆಯಿಂದ ಪ್ರತಿನಿಧಿಗಳಾಗಿ ಆಡಳಿತದ ಗರಿಷ್ಠ ಅಂಗವಾಗಿ ಸಭೆ ಸೇರುವ ಧರ್ಮಭಗಿನಿಯರು. ಕೆಲ ನಿಶ್ಚಿತ ನಿದರ್ಶನದಲ್ಲಿ ಸಂತ ಅನ್ನಮ್ಮ ಕುಟುಂಬದ ಶ್ರೀಸಾಮಾನ್ಯರೂ ಆಯ್ದ ಕೆಲವು ಅಧಿವೇಶನಗಳಲ್ಲಿ ಭಾಗವಹಿಸಬಹುದು.
8. **ಅಡಿಪಾಯ:** ಯಾವುದೇ ವಿಷಯದ ಪ್ರಗತಿಗೆ ಬೆಂಬಲವಾದ ತಳಹದಿ ಅಥವಾ ಪ್ರಾರಂಭ.
9. **ಶೌರ್ಯ:** ನಮ್ಮ ದಿನನಿತ್ಯದ ಜೀವನದಲ್ಲಿ ಎಲ್ಲ ಕೆಲಸಗಳನ್ನು ಅತ್ಯುತ್ತಮವಾಗಿ ಮಾಡಲು ನಮ್ಮ ಶಕ್ತಿಮೀರಿದ ಪ್ರಯತ್ನ.
10. **ಆತಿಥ್ಯ:** ದೇವರು ನಮಗಿತ್ತ ವರದಾನ. ಇದನ್ನು ನಮ್ಮ ದಿನನಿತ್ಯದ ಜೀವನದಲ್ಲಿ ಕಾರ್ಯಗತಗೊಳಿಸಲು ನಮಗೆ ಎಲ್ಲರನ್ನು ಸ್ವಾಗತಿಸುವ, ಇತರರ ಅವಶ್ಯಕತೆಗಳ ಪೂರೈಕೆಗೆ ನಮ್ಮನ್ನು ಲಭ್ಯಗೊಳಿಸುವ ಮತ್ತು ಸೇವೆಯನ್ನು ಅತ್ಯಂತ ಕಾತುರತೆಯಿಂದ, ಸವಿಸ್ತಾರವಾಗಿ, ಪೂರ್ಣ ಪ್ರೀತಿಯಿಂದ ಮಾಡುವ ಮನೋಭಾವ ಹೊಂದಿರುವುದು.
11. **ಗುರುತು:** ಒಬ್ಬ ವ್ಯಕ್ತಿ ಅಥವಾ ಸಮುದಾಯವನ್ನು ವಿವರಿಸುವ ಗುಂಪಿನ ಸ್ವಲಕ್ಷಣಗಳು
12. **ಜೊನ್ ಬೊನಾಲ್ ಆಧಾರ:** ಸಂತ ಅನ್ನಮ್ಮನವರ ಪರವಾತ್ಸಲ್ಯ ಭಗಿನಿಯರ ಸಭೆಗೆ ಸೇರಿದ ಸರ್ಕಾರೇತರ ಸಹಾಯಕ ಸಂಘ.
13. **ಶ್ರೀಸಾಮಾನ್ಯರು:** ಧಾರ್ಮಿಕ ವಚನ ತೆಗೆದುಕೊಳ್ಳದ ಅಥವಾ ಧರ್ಮಗುರುವಲ್ಲದ ಸಾಮಾನ್ಯ ಜನರು.



# 1. ಮುನ್ನುಡಿ

ದೇವರ ಕರೆಗೆ ಓಗೊಟ್ಟು ಧರ್ಮಗುರು ಜೊನ್ ಬೊನಾಲ್ ಮತ್ತು ಸಹೋದರಿ ಮರಿಯ ರಾಫೋಲ್ಸ್, ಮಹಿಳೆಯರು ಮತ್ತು ಪುರುಷರನ್ನೊಳಗೊಂಡ ಒಂದು ಗುಂಪಿನೊಂದಿಗೆ ತಮ್ಮ ನಾಡನ್ನು ತೊರೆದು ಡಿಸೆಂಬರ್ 28, 1804ರಂದು ಜ಼ರಗೊಜ ನಗರವನ್ನು ತಲುಪಿದರು. ಅಲ್ಲಿ ಆಧಾರ ಸ್ತಂಭದ ಮಾತೆಗೆ ಮೊರೆಯಿಟ್ಟು, ಕೃಪಾಮಾತೆಯ ಆಸ್ಪತ್ರೆಯಲ್ಲಿ ತಾವು ಕೈಗೊಳ್ಳಲು ಬಂದಿರುವ ಕೆಲಸವನ್ನು ಪ್ರೀತಿಯಿಂದಲೂ, ಅರ್ಪಣಾ ಮನೋಭಾವದಿಂದಲೂ ಮಾಡಲು ತಮಗೆ ರಕ್ಷಣೆ ನೀಡಬೇಕೆಂದು ಪ್ರಾರ್ಥಿಸಿದರು. (ನೋಡಿ. ಸಂವಿ. 2) ಇದುವೇ ಸಂತ ಅನ್ನಮ್ಮನವರ ಪರವಾತ್ಸಲ್ಯ ಭಗಿನಿಯರ ಸಭೆಯ ಉಗಮ ಮತ್ತು ಸಂತ ಅನ್ನಮ್ಮ ಕುಟುಂಬದ ಹುಟ್ಟಿನ ಬೀಜ.

ಅಂದಿನಿಂದಲೂ, ಈ ಆಸ್ಪತ್ರೆಯಲ್ಲಿ ಧಾರ್ಮಿಕ ಭಗಿನಿಯರು ಮತ್ತು ಶ್ರೀಸಾಮಾನ್ಯರು ಅಲ್ಲಿನ ಕೆಲಸವನ್ನು ಹಂಚಿಕೊಂಡು ಮಾಡುತ್ತಿದ್ದಾರೆ ಮತ್ತು ಮುಂದುವರಿದುಕೊಂಡು ಬಂದ ನಮ್ಮೆಲ್ಲರ ಸಹಕಾರದಿಂದಾಗಿ, ಇದೊಂದು ಪರಿಣಾಮಕಾರಿ ಬಂಧನದಂತೆ ಉಗಮವಾಗಿ ನಮ್ಮನ್ನೊಂದು ವರ್ಚಸ್ವೀ ಕುಟುಂಬವಾಗಿ ರೂಪುಗೊಳ್ಳುವಂತೆ ಮಾಡಿದೆ.

ನಾವು ಈ ಹಂತಕ್ಕೆ ತಲುಪಲು ವಿಭಿನ್ನ ಖಂಡಗಳಲ್ಲಿ ವೈವಿಧ್ಯಮಯ ರೀತಿಯಲ್ಲಿ 200 ವರ್ಷಗಳಿಗೂ ಹೆಚ್ಚಿನ ದೂರದ ಹಾದಿಯನ್ನು ನಡೆದಿದ್ದೇವೆ. ಜೀವನದ ವಿವಿಧ ಸ್ಥಿತಿಯ ಜನರು, ಒಂದು ಕುಟುಂಬವಾಗಿ ಅನ್ಯೋನ್ಯತೆಯಿಂದ ಈ ಸಭೆಯ ವಿಶ್ವವ್ಯಾಪಿ ಪರಸ್ನೇಹದ ವರದಾನವನ್ನು ಆತಿಥ್ಯ ರೂಪದಲ್ಲಿ ಸಹಭಾಗಿಗಳಾಗಿ ಜೀವಿಸಲು ಕರೆಯಲ್ಪಟ್ಟಿದ್ದಾರೆ. ಇದು ಧಾರ್ಮಿಕ ಭಗಿನಿಯರು ಮತ್ತು ಶ್ರೀಸಾಮಾನ್ಯರು ತಮ್ಮಲ್ಲಿರುವ ಪ್ರತಿಭೆಗಳನ್ನು ಪರಸ್ಪರ ಹಂಚಿಕೊಂಡು ಅಭಿವೃದ್ಧಿಗೊಳಿಸುವುದನ್ನು ಒಳಗೊಂಡಿರುತ್ತದೆ.

ವಿಭಿನ್ನವಾದರೂ ಪರಸ್ಪರ ಪೂರಕವಾಗಿರುವ ಪ್ರತಿಯೊಬ್ಬರ ದೈವಕರೆಗೆ ಮಾನ್ಯತೆ ಮತ್ತು ಗೌರವವನ್ನಿತ್ತು ನಾವು ದೇವರ ಸಾಮ್ರಾಜ್ಯವನ್ನು ಕಟ್ಟಲು ಬಯಸುತ್ತೇವೆ.

ಸಂತ ಅನ್ನಮ್ಮನವರ ಪರವಾತ್ಸಲ್ಯ ಭಗಿನಿಯರ ಸಭೆಯು ಪ್ರಸ್ತುತ ಸಮಯದ ಸಂಕೇತಗಳಿಗೆ ಸ್ಪಂದಿಸುತ್ತಾ, ಪ್ರಪ್ರಥಮ ಬಾರಿಗೆ, 2007ರಲ್ಲಿ ನಡೆದ XXVI ನೇ ಉನ್ನತ ಸಮಾವೇಶದಲ್ಲಿ ಶ್ರೀಸಾಮಾನ್ಯರ ಭಾಗವಹಿಸುವಿಕೆಯನ್ನು ಸ್ವಾಗತಿಸಿತು ಹಾಗೂ ಸಂತ ಅನ್ನಮ್ಮ ಕುಟುಂಬವನ್ನು ರೂಪಿಸುವಂತೆ ತನ್ನ ಕೊನೆಯ ದಾಖಲೆಯಲ್ಲಿ ಶ್ರೀಸಾಮಾನ್ಯರೂ ತಮ್ಮೊಂದಿಗೆ ಕಾರ್ಯವಹಿಸುವಂತೆ ನೂತನ ಒಳಗೊಳ್ಳುವಿಕೆಯ ಹಾದಿಗೆ ಈ ಕೆಳಗಿನ ಸಂದೇಶದೊಂದಿಗೆ ಅನುವು ಮಾಡಿಕೊಟ್ಟಿತು: **"ಧರ್ಮಭಗಿನಿಯರು ಮತ್ತು ಶ್ರೀಸಾಮಾನ್ಯರು ಸಂತ ಅನ್ನಮ್ಮ ಅವಿಭಕ್ತ ಕುಟುಂಬದ ಸದಸ್ಯರಾಗಿ ಮರಿಯ ರಾಫೋಲ್ಸ್ ಮತ್ತು ಜೊನ್ ಬೊನಾಲ್‌ರವರ ಧೀಮಂತ ವ್ಯಕ್ತಿತ್ವವನ್ನು ಹಂಚಿಕೊಂಡು ಜೀವಿಸಬೇಕೆಂದು ಆಶಿಸುತ್ತೇವೆ".**

2010ರಲ್ಲಿ ನಡೆದ XXXVII ನೇ ಅಸಾಮಾನ್ಯ ಉನ್ನತ ಸಮಾವೇಶದ ವೇಳೆ ನಡೆದ ಸಭೆಯ ಸಂವಿದಾನದ ತಿದ್ದುಪಡಿಯಲ್ಲಿ, ಸಂತ ಅನ್ನಮ್ಮ ಕುಟುಂಬದ ರೂಪುರೇಷೆಗಳ ರಚನೆಯ ಕುರಿತು ಈ ಕೆಳಗಿನಂತೆ ಖಚಿತಗೊಳಿಸಲಾಯಿತು: "ದೇವರಾತ್ಮರಿಂದ ನಾವು ಸ್ವೀಕರಿಸಿರುವ ವರದಾನವು ನಮ್ಮ ಧಾರ್ಮಿಕ ಸಂಸ್ಥೆಯೊಂದಿಗೆ ವೈವಿಧ್ಯಮಯವಾಗಿ ಅನ್ಯೋನ್ಯತೆಯಲ್ಲಿರುವ ಇತರರಿಗೂ ನೀಡಲ್ಪಟ್ಟಿದೆ. ಇದರ ಮೂಲಕ ಸಂತ ಅನ್ನಮ್ಮ ಕುಟುಂಬವನ್ನು ರೂಪಿಸಲಾಗಿದೆ". (ಸಂವಿ.9)

ಇಲ್ಲಿ ನಾವು ಸಂತೋಷದಿಂದ ಗಮನಿಸುವುದೇನೆಂದರೆ, ಈ ಸಭೆಯೊಂದಿಗೆ ಸಂಬಂಧ ಹೊಂದುವ ಜನರಿಗೆ ಈ ದೈವೀಕುಟುಂಬದ ಕರೆಯಲ್ಲಿ ತಮ್ಮನ್ನು ಗುರುತಿಸಿ,



- ಗುಂಪು ಭೇಟಿ
- ಪ್ರಾಂತ್ಯ ಮತ್ತು ಉನ್ನತ ಹಂತಗಳಲ್ಲಿ ಸಂಧಿಸುವುದು (ಹಾಜರಿದ್ದು ಅಥವಾ ದೂರವಾಣಿಯ ಮೂಲಕ).
- ವಿವಿಧ ಪ್ರಾಂತ್ಯ/ನಿಯೋಗದ ಗುಂಪು ಬ್ಲಾಗ್‌ಗಳ ಉಪಯೋಗ.
- ಸುತ್ತೋಲೆಗಳು ಅಧಿಕೃತ ವ್ಯಕ್ತಿಚಿತ್ರವನ್ನು ಸಾಮಾಜಿಕ ಜಾಲಗಳಲ್ಲಿ ಬಳಸುವುದು.
- ಧಾರ್ಮಿಕ ಸಭೆಯ ಅಂತರ್ಜಾಲ ಪುಟದ ಒಂದು ವಿಭಾಗ (ಚಟುವಟಿಕೆಗಳು, ಅಜೆಂಡಾ, ಸಂಪನ್ಮೂಲಗಳು).
- ಈಮೇಲ್‌ಗಳು (ಮಿಂಚಂಚೆ).
- ದೂರವಾಣಿ ಕರೆಗಳು, ಸಂಕ್ಷಿಪ್ತಸಂದೇಶಗಳು ಮತ್ತು ವಾಟ್ಸ್‌ಆ್ಯಪ್.

# 9. ಕ್ಲಿಷ್ಟಪದಕೋಶ

1. **ಪರಪ್ರೇಮ/ಪರವಾತ್ಸಲ್ಯ:** ನಿಸ್ವಾರ್ಥ ಪ್ರೀತಿ
2. **ಜೀವದ ವರದಾನ:** ದೇವರ ಸಾಮ್ರಾಜ್ಯವನ್ನು ವಿಸ್ತರಿಸುವುದಕ್ಕಾಗಿ ದೇವರಿಂದ ಪಡೆದ ಅಸಾಮಾನ್ಯ ಕೊಡುಗೆ
3. **ಒಪ್ಪಂದ:** ಇತರರ ಒಳಿತಿಗಾಗಿ ದುಡಿಯಲು ಸ್ವೇಚ್ಛೆಯಿಂದ ಸ್ವೀಕರಿಸಿದ ಬಾಧ್ಯತೆ.
4. **ಸಮುದಾಯ:** ತಮ್ಮ ಕರೆಗೆ ಓಗೊಟ್ಟು, ತಮ್ಮ ಗುರುತು ಮತ್ತು ಸಾಮುದಾಯಿಕ ಜೀವನ ಯೋಜನೆಯನ್ನು ಹಂಚಿ ಜೀವಿಸುವ ಸಂತ ಅನ್ನಮ್ಮ ಕುಟುಂಬದ ಸ್ಥಿರ ವ್ಯಕ್ತಿಗಳ ಗುಂಪು.
5. **ಸಂವಿದಾನ:** ಒಂದು ಧಾರ್ಮಿಕ ಸಭೆಯಲ್ಲಿ ಒಂದಾಗಿ, ಒಟ್ಟಾಗಿ ಜೀವಿಸುವ ವ್ಯಕ್ತಿಗಳ ಜೀವನಶೈಲಿ ಮತ್ತು ಕ್ರಿಸ್ತರ ಹಿಂಬಾಲಿಕೆಯನ್ನು ವ್ಯಕ್ತಪಡಿಸುವ ಸರ್ವೋಚ್ಚ ಕಾಯಿದೆ.

- ಗುಂಪು ಅಥವಾ ಸಮುದಾಯಗಳಲ್ಲಿ ಒಂದುಗೂಡಲು ಪ್ರಯತ್ನಿಸುವುದು.
- ಶ್ರೀಸಾಮಾನ್ಯರ ಸಭೆಗೆ ಸೇರುವ ಮುನ್ನ ಸಭೆಯ ರೀತಿ ನೀತಿಗಳನ್ನು ಅರಿಯುವ ಹಂತಗಳಲ್ಲಿ ಭಾಗವಹಿಸುವುದು.
- ಸಭೆಗಳು, ಆಚರಣೆಗಳು, ರಚನೆ, ಪ್ರಾರ್ಥನಾಕೂಟಗಳು, ಅಂತರರಾಷ್ಟ್ರೀಯ ಕೂಟಗಳಲ್ಲಿ ಭಾಗವಹಿಸುವುದು.
- ಸಂತ ಅನ್ನಮ್ಮ ಕುಟುಂಬದ ಚಟುವಟಿಕೆಗಳನ್ನು ತಯಾರಿಸಲು ಮತ್ತು ಅವುಗಳನ್ನು ನಡೆಸಿಕೊಡಲು ಮುಂದೆ ಬಂದು ಜವಾಬ್ದಾರಿ ಹೊರುವುದು.
- ನಿರ್ದಿಷ್ಟ ಉನ್ನತ ಮತ್ತು ಪ್ರಾಂತೀಯ ಸಭೆಗಳಲ್ಲಿ, ಸಂವಿದಾನ ಜೀವನ ರೀತಿನೀತಿಯ ಸಂಖ್ಯೆ 119 ಮತ್ತು 140 (ಶ್ರೀಸಾಮಾನ್ಯರು)ರಲ್ಲಿ ಹೇಳಿದಂತೆ ಭಾಗವಹಿಸುವುದು. ಶ್ರೀಸಾಮಾನ್ಯ ಸದಸ್ಯರಿಗೆ ಅವರನ್ನು ಆರಿಸುವ ಪ್ರಕ್ರಿಯೆಯನ್ನು ಬೇರೆ ಕೈಪಿಡಿಯಲ್ಲಿ ವಿವರಿಸಲಾಗುವುದು.
- ಇತರ ಗುಂಪುಗಳ ಮತ್ತು ನಮ್ಮ ಮಿತಿಯಲ್ಲಿರುವ ಭೂರೇಷೆಗಳ ಸಮುದಾಯಗಳ ಸಂಯೋಜನೆ ಮಾಡುವುದು.
- ಹೊಸ ರೀತಿಯ ಬಡತನದ ಅಗತ್ಯಗಳನ್ನು ಮುಕ್ತ ಮನಸ್ಸಿನಿಂದ ಅರಿತು ಅದರ ನಿವಾರಣಾ ಮಾರ್ಗಗಳನ್ನು ಹುಡುಕಲು ತಮ್ಮನ್ನು ಬದ್ಧರನ್ನಾಗಿಸುವುದು.
- ಪರಿಸರಪರವಾದ ಜೀವನಶೈಲಿಯನ್ನು ಹೊಂದಿದ್ದು, ಅದರ ಉತ್ಪನ್ನಗಳ ಸದುಪಯೋಗದಿಂದ ಭೂಮಾತೆಯನ್ನು ಗೌರವಿಸಿ, ಪ್ರೀತಿಯಿಂದ ನೋಡಿಕೊಳ್ಳುವ ಜವಾಬ್ದಾರಿ ಹೊಂದುವುದು.

### 8.4 ಸಂಬಂಧ ಮತ್ತು ಸಂಪರ್ಕಸಾಧನಗಳು

ನಾವು ಸಂಪರ್ಕ ಏರ್ಪಡಿಸಲು ಬಳಸುವ ಹಾದಿಗಳು:

- ವೈಯುಕ್ತಿಕ ಬೇಟಿ



ನಮ್ಮ ಸಂಸ್ಥಾಪಕರ ಶೈಲಿಯಂತೆ ತಮ್ಮ ಕರೆಗೆ ಬದ್ಧರಾಗಿ ಜೀವಿಸಲು ಬೇಕಾದ ಮಾರ್ಗದರ್ಶನ ನೀಡಿ ಶಕ್ತಿವಂತರನ್ನಾಗಿಸಲು ದೇವರಾತ್ಮರು ನಮ್ಮನ್ನು ಮುನ್ನಡೆಸುತ್ತಾರೆ.

## 2. ಅಡಿಪಾಯ

***“ದೇವರ ವಿವಿಧ ವರಗಳ ವಿಷಯದಲ್ಲಿ ಉತ್ತಮ ನಿರ್ವಾಹಕನಂತೆ ಪ್ರತಿಯೊಬ್ಬನೂ ದೇವರು ತನಗೆ ಕೊಟ್ಟಿರುವ ವಿಶೇಷ ವರದಾನಗಳನ್ನು ಇತರರ ಒಳಿತಿಗಾಗಿ ಬಳಸಲಿ”. (1 ಪೇತ್ರ 4:10)***

ಪವಿತ್ರಾತ್ಮ ಪ್ರೇರಿತರಾಗಿ ಯೇಸುವನ್ನು ಹಿಂಬಾಲಿಸುತ್ತಾ, ನಮ್ಮ ಸಂಸ್ಥಾಪಕರು ತಮ್ಮ ಕಾಲದ ಜನರಿಗೆ, ಅದರಲ್ಲೂ ಹೆಚ್ಚಾಗಿ ಕಡುಬಡವರಿಗೆ ಹಾಗೂ ಕೊರತೆಯಲ್ಲಿರುವವರಿಗೆ ಶುಭಸಂದೇಶವಾದರು. ಅವರಂತೆಯೇ ನಾವೂ ಸಹ ದೇವರ ಕರುಣಾಭರಿತ ವದನವನ್ನು, ನಾವು ಜೀವಿಸುವ ವಿವಿಧ ಸನ್ನಿವೇಶಗಳಲ್ಲಿ ತೋರಿಸಲು ಬಯಸುತ್ತೇವೆ. ಪ್ರಸ್ತುತ ಸಮಯದ ಸಂಕೇತಗಳಿಗೆ ಅನುಗುಣವಾಗಿ ದೇವರ ವರದಾನವನ್ನು ನವೀಕರಿಸಿ ಜೀವಂತವಾಗಿಡುವುದು ನಮ್ಮ ಜವಾಬ್ದಾರಿಯಾಗಿದೆ.

ಆತಿಥ್ಯವೆಂಬುದು ದೇವರು ನಮಗಿತ್ತಿರುವ ವರದಾನದ ಕೇಂದ್ರಬಿಂದು. ದೇವರ ಆತಿಥ್ಯದ ಪ್ರತಿಬಿಂಬ. ದೇವರು ತನ್ನ ಒಬ್ಬನೇ ಮಗನನ್ನು ಈ ಪ್ರಪಂಚಕ್ಕೆ ಕಳುಹಿಸುವುದರ ಮೂಲಕ ತಮ್ಮ ಪ್ರೀತಿಯನ್ನು ಮೊದಲು ನಮಗೆ ತೋರಿಸಿ ಅದನ್ನು ವ್ಯಕ್ತಪಡಿಸಿದರು. ಪ್ರಭುಯೇಸು, ತಂದೆಯೊಂದಿಗೆ ಒಂದಾಗಿ ಅವರ ಕರುಣಾಪೂರಿತ ಪ್ರೀತಿಯನ್ನು ವ್ಯಕ್ತಪಡಿಸುತ್ತಾ, ಅವರ ಲೋಕರಕ್ಷಣೆಯ ಯೋಜನೆಯನ್ನು ಕಾರ್ಯಗತಗೊಳಿಸಿದರು.

ದೇವರಿಂದ ನಾವು ಪಡೆದ ಪ್ರೀತಿಯನ್ನು ಪರಪ್ರೀತಿಯಾಗಿ ಮಾರ್ಪಡಿಸುವುದು ಅತ್ಯಗತ್ಯ. ನಮ್ಮ ಸಂಸ್ಥಾಪಕರು ಮತ್ತು ಪ್ರಥಮ ಸಹೋದರಿಯರು ತಮ್ಮ ಸೋದರತ್ವದೊಂದಿಗೆ ದೇವರ ಪ್ರೀತಿಯ ಅಭಿವ್ಯಕ್ತಿಗಳಾಗಿದ್ದರು ಮತ್ತು ಯಾರೊಬ್ಬರನ್ನೂ ಬಿಡದೆ ಎಲ್ಲರನ್ನೂ ಒಂದು ಕುಟುಂಬದೊಳಗೆ ತರಲು ಬಯಸಿದರು. (ಸಂವಿ. 62)

ಸಂತ ಅನ್ನಮ್ಮನವರ ಕುಟುಂಬವು ದೇವರ ಮಕ್ಕಳನ್ನೊಳಗೊಂಡ ಕುಟುಂಬ. ಯೇಸುವಿನಂತೆ ಮತ್ತು ಆತಿಥ್ಯವಾಗಿ ಮಾರ್ಪಟ್ಟ ದೇವರ ವರದಾನ ವಿಶ್ವವ್ಯಾಪಿ ಪರಪ್ರೇಮವನ್ನು ಇನ್ನೂ ಹೆಚ್ಚಾಗಿ ಮಾನವೀಯತೆಯಲ್ಲಿ ರೂಪಾಂತರಗೊಳಿಸಲು ಬಯಸುತ್ತದೆ.

ಅರ್ಪಣಾ ಜೀವನವು ತನ್ನ ಬದ್ಧತೆಯನ್ನು ಪರಿಣಾಮಕಾರಿಯಾಗಿ ಜೀವಿಸಲು ಒಂದು ನೂತನ ವಿನ್ಯಾಸವನ್ನು ಕಂಡುಹಿಡಿದಿದೆ. ಇದರ ಅಡಿಯಲ್ಲಿ ಒಂದೇ ಬಗೆಯ ವರದಾನದ ಕೊಡುಗೆಯ ಕೃಪೆಯನ್ನು ಪಡೆದ ಎಲ್ಲರೂ ಒಂದಾಗಿ ಸಹಜೀವನದಲ್ಲಿ ಪ್ರವೇಶಿಸುತ್ತಾರೆ. ಈ ವಿನ್ಯಾಸವೇ 'ವರದಾನದ ಕುಟುಂಬ'. (ಆತಿಥ್ಯದ ಹೊಸ ಮಾರ್ಗಗಳು 122)

ಅನೇಕ ಸಂಸ್ಥೆಗಳು ತಮ್ಮ ಸೇವೋದ್ದೇಶವನ್ನು ಶ್ರೀಸಾಮಾನ್ಯರೊಂದಿಗೆ ಹಂಚಿಕೊಳ್ಳುವ ತೀರ್ಮಾನಕ್ಕೆ ಬಂದಿದ್ದಾರೆ. ದೇವರಿಗೆ ಸಮರ್ಪಿತ ಜನರ ಮತ್ತು ಶ್ರೀಸಾಮಾನ್ಯರ ಮಧ್ಯೆ ದಾರಾಳ ಭರವಸೆಯ ಹೊಸ ಅಧ್ಯಾಯವೊಂದು ಸಂಬಂಧಗಳ ಇತಿಹಾಸದಲ್ಲಿ ಇಂದು ಉದ್ಭವಿಸಿದೆ (VC. 54). ಅನ್ಯೋನ್ಯತೆಯೆಂಬುದು ದೇವರ ಒಂದು ಕೊಡುಗೆ. ನಮ್ಮ ಶಕ್ತಿಗನುಗುಣವಾಗಿ ನಮ್ಮ ಪೂರಕ ಕೆಲಸಗಳನ್ನು ಮಾಡಲು ಮತ್ತು ನಮ್ಮ ವರ್ಚಸ್ಸಿನಂತೆ ಕೃತಜ್ಞತೆ, ಬದ್ಧತೆ ಮತ್ತು ಜವಾಬ್ದಾರಿಯಿಂದ ಜೀವಿಸಲು ನಾವು ಕರೆಯಲ್ಪಟ್ಟಿದ್ದೇವೆ.



- **ಖಜಾಂಚಿ**
  - ಸಂಯೋಜಕರೊಂದಿಗೆ ಸಹಕರಿಸಿ, ಎಲ್ಲಾ ಸರಕುಗಳ ಮೇಲ್ವಿಚಾರಣೆ ಮಾಡುವುದು ಮತ್ತು ವರ್ಷಕ್ಕೊಮ್ಮೆಯಾದರೂ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಗುಂಪಿಗೆ ಮಾಹಿತಿ ನೀಡುವುದು.
  - ನಿಧಿ ಸಂಗ್ರಹಣಾ ಕಾರ್ಯದಲ್ಲಿ ಸಂಯೋಜಕರೊಂದಿಗೆ ಸಹಕರಿಸುವುದು.
  - ಸದಸ್ಯರ ಸ್ವಯಂಪ್ರೇರಿತ ದಾನ ಮತ್ತು ಹಣ ಸಂಗ್ರಹಣೆಗಾಗಿ ನಡೆಸಿದ ಇತರ ಚಟುವಟಿಕೆಗಳಿಂದ ಬಂದಂತಹ ಹಣಕಾಸಿನ ಜವಾಬ್ದಾರಿ ಹೊಂದುವುದು.

ಪ್ರಾಂತೀಯ/ ನಿಯೋಗ ಹಂತದಲ್ಲಿ ಮೊದಲೇ ನಿರ್ಧರಿಸಿದ ಮೊತ್ತಕ್ಕಿಂತ ಹೆಚ್ಚು ಹಣವಿದ್ದರೆ ಅದನ್ನು ಜಂಟಿ ಖಾತೆಯಲ್ಲಿ ಬ್ಯಾಂಕಿನಲ್ಲಿ ಠೇವಣಿಸಿ ಉಪಯೋಗಿಸುವುದು.

ಈ ಸೇವೆಗಳನ್ನು ಸಲ್ಲಿಸುವವರನ್ನು ಗುಂಪಿನ ಸದಸ್ಯರು 3 ವರ್ಷಗಳ ಅವಧಿಗೆ (ಮರುಚುನಾವಣೆಯ ಸಾಧ್ಯತೆಯೊಂದಿಗೆ) ಚುನಾಯಿಸುತ್ತಾರೆ. (ಇಲ್ಲಿ ಸೇರಿಸಿಲ್ಲದ ವಿಶೇಷ ಸನ್ನಿವೇಶಗಳನ್ನು ಗಮನದಲ್ಲಿಡಬೇಕು).

ನಿರ್ದಿಷ್ಟ ಕಾರ್ಯಗಳಿಗೆ ವಿವಿಧ ಹಂತಗಳಲ್ಲಿ ನಿಯೋಗಗಳನ್ನು ನೇಮಿಸಲಾಗುವುದು. ಇವುಗಳ ಸದಸ್ಯರು ಗುಂಪುಗಳ ಸಂಯೋಜಕರೇ ಆಗಬೇಕಾಗಿಲ್ಲ. ಅವರನ್ನು ನಿರ್ದಿಷ್ಟ ಕೆಲಸಕ್ಕಾಗಿ ಗುಂಪಿನ ಸದಸ್ಯರ ಮಧ್ಯದಿಂದ ಚುನಾಯಿಸಲಾಗುವುದು.

## 8.3 ಕಾರ್ಯವಿಧಾನದ ಮಾನದಂಡಗಳು

ಸಂತ ಅನ್ನಮ್ಮ ಕುಟುಂಬದ ಸದಸ್ಯರು ತಮ್ಮ ನಿರ್ದಿಷ್ಟ ಕರೆಯ ಪ್ರಕಾರ ಮಾಡಬೇಕಾದ ಕೆಲಸಗಳು:

- ಗುಂಪಿನ ಕಾರ್ಯಚಟುವಟಿಕೆಯ ಮತ್ತು ಕಾರ್ಯಯೋಜನೆಯ ಮೌಲ್ಯಮಾಪನ ಮಾಡುವುದು.
- ಸಭೆಯ ನಡವಳಿಕೆಗಳನ್ನು ತಯಾರು ಮಾಡುವುದು.
- ಖಜಾಂಚಿಗೆ ಸಹಕಾರಿಯಾಗಿ ನಿಧಿ ಸಂಗ್ರಹಣೆಯ ಹಾದಿಗಳನ್ನು ಹುಡುಕುವುದು.
- ಸಂಯೋಜಕರ ಸಮಾವೇಶದಲ್ಲಿ ತನ್ನ ಗುಂಪನ್ನು ಪ್ರತಿನಿಧಿಸುವುದು.
- ಇತರ ಮುಖ್ಯ ಕಾರ್ಯಕ್ರಮಗಳಲ್ಲಿ ತನ್ನ ಗುಂಪನ್ನು ಪ್ರತಿನಿಧಿಸುವುದು.
- ಸಂತ ಅನ್ನಮ್ಮ ಕುಟುಂಬಕ್ಕೆ ಸಂಬಂದಿಸಿದ ವಾಟ್ಸ್‌ಆಪ್ ಗುಂಪುಗಳು, ಬ್ಲಾಗ್ಸ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಜವಾಬ್ದಾರಿಯುತ ಬಳಕೆಯ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಸ್ಥಳೀಯ ಮತ್ತು ಪ್ರಾಂತೀಯ ಹಂತದಲ್ಲಿ ಸಂತ ಅನ್ನಮ್ಮ ಕುಟುಂಬದ ಉನ್ನತ ಶಾಸಕರಲ್ಲಿ ಸಂವಹನ ನಿರ್ವಹಿಸುವುದು.

■ **ಕಾರ್ಯದರ್ಶಿ**

- ಗುಂಪಿನ ಹಾಗುಹೋಗುಗಳ ವರದಿ ಬರೆದು ಅದನ್ನು ಪ್ರಸ್ತುತಗೊಳಿಸಿಡುವುದು.
- ಸಂತ ಅನ್ನಮ್ಮ ಕುಟುಂಬದ ಇತರ ಗುಂಪುಗಳೊಂದಿಗೆ ಆಂತರಿಕ ಮತ್ತು ಬಾಹ್ಯ ಮಟ್ಟದಲ್ಲಿನ ಸಂಪರ್ಕದ ಜವಾಬ್ದಾರಿ ಹೊಂದುವುದು.
- ಗುಂಪಿನ ಸದಸ್ಯರನ್ನು ಸಂಪರ್ಕಿಸಲು ಅವರ ದೂರವಾಣಿ, ವಿಳಾಸಗಳನ್ನು ಸಂಗ್ರಹಿಸಿ ನಿಗದಿತ ಖಡತದಲ್ಲಿ ಬರೆದಿಡುವುದು.
- ಗುಂಪಿನ ವಿವಿಧ ಕಾರ್ಯಕ್ರಮಗಳ ವಿವರವನ್ನು ಕನಿಷ್ಠ ಪಕ್ಷದಲ್ಲಿ ದಿನಾಂಕ, ವಿಷಯ, ಭಾಗವಹಿಸಿದ ಸದಸ್ಯರ ಸಂಖ್ಯೆಯನ್ನು ನಮೂದಿಸಿ ಕಾಲಾನುಕ್ರಮದ ವರದಿಯನ್ನು ಸವಿಸ್ತಾರವಾಗಿ ಬರೆದಿಡುವುದು.



# 3. ಸಂತ ಅನ್ನಮ್ಮ ಕುಟುಂಬದ ವ್ಯಾಖ್ಯಾನ

ಸಂತ ಅನ್ನಮ್ಮ ಕುಟುಂಬ ಎಂದರೆ ನಮ್ಮ ಸಂಸ್ಥಾಪಕರಾದ ಮರಿಯ ರಾಫೋಲ್ಸ್ ಬ್ರೂನ ಮತ್ತು ಜೊನ್ ಬೊನಾಲ್ ಕೊರ್ತಾದರವರ ಸ್ಪೂರ್ತಿಯಂತೆ ಆತಿಥ್ಯವಾಗಿ ಪರಿವರ್ತಿತವಾದ ನಮ್ಮ ವರದಾನವಾದ ಪರಪ್ರೇಮವನ್ನು ತಮ್ಮ ತಮ್ಮ ನಿರ್ದಿಷ್ಟ ಕರೆ ಮತ್ತು ವಾಸ್ತವಿಕತೆಯ ಪ್ರಕಾರ ಹಂಚಿ ಜೀವಿಸುವ ಜನಸಮೂಹ.

ಇದು ಒಂದು ವಿಸ್ತಾರ ಕುಟುಂಬ; ವಿವಿಧ ವಯಸ್ಸು, ಲಿಂಗ, ಧರ್ಮ, ದೇವರ ಇರುವಿಕೆಯನ್ನು ಕಂಡುಹಿಡಿಯಲು ಬಯಸುವ ನಿರೀಶ್ವರವಾದಿಗಳು, ಭಾಷೆ, ಜನಾಂಗೀಯತೆ, ಜಾತಿ ಅಥವಾ ಸಾಮಾಜಿಕ ಸ್ಥಿತಿ ಇತ್ಯಾದಿ ಭೇದವಿಲ್ಲದ ಸ್ವ-ಇಚ್ಛೆಯಿಂದ ಒಂದಾಗಿ ಸೇರಿದ ಜನರ ಗುಂಪಾಗಿದೆ. ಈ ಕುಟುಂಬದ ಸದಸ್ಯರು ಸಭೆಯೊಂದಿಗಿನ ಸಹಭಾಗತ್ವದೊಂದಿಗೆ ಇದರ ನಾಲ್ಕು ಆಧಾರ ಸ್ತಂಭಗಳಾದ **ಪ್ರಾರ್ಥನೆ, ಸೋದರತ್ವ, ರಚನೆ** ಮತ್ತು **ಬದ್ಧತೆ**ಯನ್ನು ವಿವಿಧ ರೀತಿಯಲ್ಲಿ ಹಂಚಿಕೊಳ್ಳುತ್ತಾರೆ.

# 4. ಗುರುತಿಸುವ ಲಕ್ಷಣಗಳು

ಸಂತ ಅನ್ನಮ್ಮ ಕುಟುಂಬದ ಸದಸ್ಯರು ತಮ್ಮ ಗುರುತನ್ನು ಹಂತ ಹಂತವಾಗಿ ಕಂಡುಹಿಡಿದು ಈ ರೀತಿಯಾಗಿ ಜೀವಿಸುತ್ತಾರೆ:

1. ನಜರೇತಿನ ಯೇಸುವಿನಿಂದ ಅಥವಾ ಅವರ ಬೋಧನೆಯಿಂದ ಆಕರ್ಷಿತರಾಗಿ ಹೆಚ್ಚಿನ ಮಾನವೀಯ, ಸಹೋದರತ್ವದ ಪ್ರಪಂಚವೊಂದನ್ನು ಕಟ್ಟಲು ಬಯಸುವುದು.

2. ದೇವರ ವರದಾನವಾದ ವಿಶ್ವವ್ಯಾಪಿ ಪರಪ್ರೇಮದಿಂದ ಉತ್ಕೃಷ್ಟಗೊಂಡು ಬಡವರಿಗೆ, ವಿಶೇಷವಾಗಿ ಕಡುಬಡವರಿಗೆ ಮತ್ತು ನಿರ್ಗತಿಕರಿಗೆ ಕೆಚ್ಚೆದೆಯಿಂದ ಆತಿಥ್ಯವನ್ನು ತೋರಿಸುವುದು.
3. ದೈವವಾಕ್ಯ ಮತ್ತು ಪ್ರಾರ್ಥನೆಯಿಂದ ಪೋಷಿಸಲ್ಪಡುವುದು.
4. ಎಲ್ಲರನ್ನು ಸ್ವಾಗತಿಸುವ ಮನೋಭಾವ, ಸರಳತೆ, ನಮ್ರತೆ, ಇತರರ ಅವಶ್ಯಕತೆಗೆ ಸ್ಪಂದಿಸುವ ಮತ್ತು ನೆರವಾಗುವ ಶಕ್ತಿ, ಹರ್ಷಚಿತ್ತ ಮುಂತಾದ ಗುಣಗಳಿಂದ ಕೂಡಿರುವುದು.
5. ಅತ್ಯಂತ ಕಳಕಳಿಯಿಂದ, ಸವಿಸ್ತಾರವಾಗಿ ತಮ್ಮ ಸಮರ್ಪಣೆ ಅಥವಾ ಶರಣಾಗತಿಯನ್ನು ಪ್ರೀತಿಯಿಂದ ಜೀವಿಸುವುದು.
6. ಸೇವಾ ಮನೋಭಾವದೊಂದಿಗೆ ಜವಾಬ್ದಾರಿ ಮತ್ತು ಕರುಣೆಯುಳ್ಳವರಾಗಿರುವುದು.
7. ಕೊರತೆಯುಳ್ಳವರ ಘನತೆಯನ್ನು ಅರಿತು, ಅವರ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸುವುದು.
8. ಗುಂಪಾಗಿ ದುಡಿಯುವ ಚೈತನ್ಯ ಹಾಗೂ ಐಕ್ಯತೆಯನ್ನು ಪಡೆದಿರುವುದು.
9. ಕುಟುಂಬಭಾವ, ಅನ್ಯೋನ್ಯತೆ ಮತ್ತು ಸಹೋದರತ್ವ ಮನೋಭಾವವನ್ನು ಹೊಂದಿರುವುದು.
10. ಮಾನವೀಯ, ಆಧ್ಯಾತ್ಮಿಕ ಮತ್ತು ವರ್ಚಸ್ಸಿನ ಕುಟುಂಬ ಮುಂತಾದ ವಿಷಯಗಳಲ್ಲಿ ತಮ್ಮನ್ನು ರೂಪಿಸಿಕೊಳ್ಳಲು ಸಿದ್ಧರಿರುವುದು.
11. ನಮ್ಮ ತೇಜಸ್ವೀ ಕುಟುಂಬದ ಆಧ್ಯಾತ್ಮಿಕತೆಯನ್ನು ತಮ್ಮ ತಮ್ಮ ಕರೆಯ ಪ್ರಕಾರ ಜೀವಿಸುವುದು.



- ಪ್ರತೀ ಪ್ರಾಂತ್ಯ/ನಿಯೋಜಕದ ಜವಾಬ್ದಾರಿ ಹೊತ್ತ ಶ್ರೀಸಾಮಾನ್ಯ ಸಂಯೋಜಕರು.

<u>4. ಸಭೆಯ ಉನ್ನತ ಹಂತ</u>

- ಸಭೆಯ ಉನ್ನತ ಅಧಿಕಾರಿ
- ಸಂತ ಅನ್ನಮ್ಮ ಕುಟುಂಬದ ಜವಾಬ್ದಾರಿ ಹೊತ್ತ ಉನ್ನತ ಶಾಸಕರು.
- ಸಂತ ಅನ್ನಮ್ಮ ಕುಟುಂಬದ ಜವಾಬ್ದಾರಿ ಹೊತ್ತ ಪ್ರಾಂತೀಯ/ನಿಯೋಜಕದ ಶಾಸಕರು.
- ಪ್ರಾಂತೀಯ/ನಿಯೋಜಕ ಹಂತದ ಶ್ರೀಸಾಮಾನ್ಯ ಸಂಯೋಜಕರು (ತನ್ನ ಖಂಡ ಮತ್ತು ಇತರ ಖಂಡಗಳಲ್ಲಿ ಕೆಲಸ ಮಾಡಲು).

## 8.2. ಜವಾಬ್ದಾರಿಗಳ ವಿತರಣೆ

ಉಲ್ಲೇಖಿಸಿದ ಗುಂಪುಗಳಲ್ಲಿ ಜವಾಬ್ದಾರಿಗಳ ವಿತರಣೆಯನ್ನು ಈ ರೀತಿ ಮಾಡಲಾಗಿದೆ:

- **ಸಂಯೋಜಕರು:** (ವಿವಿಧ ಹಂತಗಳಾದ ಉನ್ನತ/ಪ್ರಾಂತೀಯ/ಸ್ಥಳೀಯ ಮಟ್ಟಗಳಲ್ಲಿ ಅವರ ತಂಡದೊಂದಿಗೆ)
    - ಕುಟುಂಬದ ನಾಲ್ಕು ಆಧಾರ ಸ್ತಂಭಗಳಾದ ಪ್ರಾರ್ಥನೆ – ರಚನೆ – ಸಹೋದರತ್ವ – ಬದ್ಧತೆಯನ್ನು ಹೊಂದಿರುವ ವಾರ್ಷಿಕ ಕಾರ್ಯಯೋಜನೆಯನ್ನು ತಯಾರಿಸುವುದು.
    - ಗುಂಪಿನ / ಶ್ರೀಸಾಮಾನ್ಯ ಜನಸಮುದಾಯದ ಜವಾಬ್ದಾರಿಗಳನ್ನು ಸ್ವೀಕರಿಸುವುದು.

– ಕಾರ್ಯದರ್ಶಿ

– ಖಜಾಂಚಿ

- 6ಕ್ಕಿಂತ ಕಡಿಮೆ ಸದಸ್ಯರಿದ್ದಾಗ, ಸಂತ ಅನ್ನಮ್ಮ ಕುಟುಂಬದ ಜವಾಬ್ದಾರಿ ಹೊತ್ತ ಒಬ್ಬರು ಸಂಯೋಜನೆ ಮಾಡುವರು.

2. <u>ಪ್ರಾಂತೀಯ/ನಿಯೋಗ ಹಂತ</u>

- ಪ್ರಾಂತೀಯ ಅಧಿಕಾರಿ/ನಿಯೋಜಕರು
- ಸಂತ ಅನ್ನಮ್ಮ ಸಭೆಯ ಪ್ರಾಂತೀಯ ಶಾಸಕರು
- ಪ್ರಾಂತೀಯ ಮಿಶ್ರ ತಂಡ (ಧರ್ಮಭಗಿನಿಯರು + ಶ್ರೀಸಾಮಾನ್ಯರು) : ಸಂಯೋಜಕರು – ಕಾರ್ಯದರ್ಶಿ – ಖಜಾಂಚಿ.

ಪ್ರತೀ ಪ್ರಾಂತ್ಯ/ನಿಯೋಗದಲ್ಲಿ ಅವರವರ ಪರಿಸ್ಥಿತಿಗೆ ಅನುಕೂಲವಾದಂತೆ ತಂಡಕ್ಕೆ ಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ನಿರ್ಧರಿಸಬಹುದು. ಸಾಮಾನ್ಯವಾಗಿ ತಮ್ಮ ವಲಯ, ರಾಜ್ಯ, ಪ್ರಾಂತ್ಯ, ದೇಶ, ದ್ವೀಪ ಮುಂತಾದುವುಗಳನ್ನು ಪ್ರತಿನಿಧಿಸುವ ಸದಸ್ಯರನ್ನೊಳಗೊಂಡು ಇದನ್ನು ರಚಿಸುತ್ತಾರೆ.

3. <u>ಭೂಖಂಡಗಳ ಹಂತ</u>

- ಸಂತ ಅನ್ನಮ್ಮ ಕುಟುಂಬದ ಜವಾಬ್ದಾರಿ ಹೊತ್ತ ಉನ್ನತ ಶಾಸಕರು.
- ಪ್ರತೀ ಪ್ರಾಂತ್ಯ/ನಿಯೋಜಕದ ಸಂತ ಅನ್ನಮ್ಮ ಕುಟುಂಬದ ಜವಾಬ್ದಾರಿ ಹೊತ್ತ ಶಾಸಕರು.



# 5. ಸಹಜೀವನದ ಮಾನದಂಡಗಳು

ಸಂತ ಅನ್ನಮ್ಮ ಕುಟುಂಬಕ್ಕೆ ಸೇರಿದ ಶ್ರೀಸಾಮಾನ್ಯರ ಸೇರ್ಪಡಿಕೆಯ ಮಾನದಂಡಗಳು:

1. ಸ್ವಹಿತವನ್ನು ಬಯಸದೆ ಸ್ವೇಚ್ಛೆಯಿಂದ ಪರಹಿತವನ್ನು ಆಯ್ಕೆ ಮಾಡುವುದು.

   – ಸಭೆಯ ಯಾವುದೇ ಕೇಂದ್ರದಲ್ಲಿ ಕೆಲಸ ಮಾಡುವವರಿಗಾಗಲಿ, ಸ್ವೇಚ್ಛೆಯಿಂದ ಸೇವಾಕಾರ್ಯ ಮಾಡುವವರಿಗಾಗಲಿ ಇವುಗಳಿಗೆ ಹೊಂದಿಕೊಂಡಿರುವ ಗುಂಪು ಅಥವಾ ಸಂಘಗಳಿಗೆ ಸೇರಿದವರಿಗಾಗಲಿ, ಸಂತ ಅನ್ನಮ್ಮ ಕುಟುಂಬ ಏರ್ಪಡಿಸಿದ ಕೆಲಸಕಾರ್ಯಗಳಲ್ಲಿ ನೆರವು ನೀಡುವವರಿಗಾಗಲಿ, ಜೊನ್ ಬೊನಾಲ್ ಆಧಾರ ಸಂಸ್ಥೆಯ ಪ್ರಾಯೋಜಕತ್ವದ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರಿಗಾಗಲಿ ಸದಸ್ಯತ್ವ ಪೂರ್ವ ನಿರ್ಧರಿತವಾಗಿದೆ ಎಂದು ಊಹಿಸಲಾಗದು.

   – ಸಂತ ಅನ್ನಮ್ಮ ಕುಟುಂಬವು ಸಂಘಟಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮಕ್ಕಳೆಲ್ಲರು ತಮ್ಮ ಸ್ವೇಚ್ಛೆಯಿಂದ ಸ್ವತಂತ್ರವಾಗಿ ಆಯ್ಕೆ ಮಾಡಿ ಪೂರ್ಣ ಸದಸ್ಯತ್ವ ಪಡೆಯುವವರೆಗೆ, ಸದಸ್ಯತ್ವ ಪ್ರಕ್ರಿಯೆಯಲ್ಲಿರುವ ಸದಸ್ಯರೆಂದು ಪರಿಗಣಿಸಲಾಗುವುದು.

2. ಪ್ರಪಂಚದ ಎಲ್ಲೆಡೆಗಳಲ್ಲಿ ಈ ಕುಟುಂಬಕ್ಕೆ ಸೇರಿದ ಇತರ ಸದಸ್ಯರೊಡನೆ ದೇವರ ವರದಾನ ನೀಡಿರುವ ಚೇತನದಿಂದ ದೇವಜನರ ಸೇವಾಕಾರ್ಯವನ್ನು ಹಂಚಿಕೊಂಡು ಸಹೋದರತ್ವಕ್ಕೆ ಬದ್ಧರಾಗಿ ಜೀವಿಸುವುದು.

3. ಸಂತ ಅನ್ನಮ್ಮ ಕುಟುಂಬದ ಎಲ್ಲಾ ರೀತಿಯ ಸಮುದಾಯಗಳು, ಗುಂಪುಗಳು, ಅಸ್ತಿತ್ವಗಳು, ಚಟುವಟಿಕೆಗಳು ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.
4. ಸಂತ ಅನ್ನಮ್ಮ ಕುಟುಂಬದೊಂದಿಗೆ ಭಾವುಕ ಹಾಗು ಪರಿಣಾಮಕಾರಿ ಸಂಬಂಧ ಬೆಳೆಸಿಕೊಳ್ಳುವುದು.
5. ಸಂತ ಅನ್ನಮ್ಮ ಕುಟುಂಬ ಸದಸ್ಯತ್ವವನ್ನು ಗುರುತಿಸುವ ಲಕ್ಷಣಗಳನ್ನು ಕಾಲಕ್ರಮೇಣ ತಮ್ಮದಾಗಿಸಿಕೊಳ್ಳುವುದು.

# 6. ಭಾಗವಹಿಸುವ ಹಾದಿಗಳು

ಈ ಮೊದಲು ತಿಳಿಸಿರುವ 4 ಆಧಾರಸ್ತಂಭಗಳಾದ ಪ್ರಾರ್ಥನೆ, ರಚನೆ, ಸಹೋದರತ್ವ ಮತ್ತು ಬದ್ಧತೆಗೆ ಸಂಬಂದಿಸಿದ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದು. ಉದಾ:

## ಪ್ರಾರ್ಥನೆ

- ದೇವರ ವಾಕ್ಯದ ಆಳವಾದ ಚಿಂತನೆ.
- ಧ್ಯಾನ ಮತ್ತು ಪ್ರಾರ್ಥನಾ ದಿನಗಳ ಅನುಸರಣೆ.
- ದಿವ್ಯ ಬಲಿಪೂಜೆ, ಆರಾಧನೆ ವಿಧಿ ಮತ್ತು ಧರ್ಮಸಭೆಯ ಅನುದಿನದ ಪ್ರಾರ್ಥನೆಗಳು.



- **ಸಂತ ಅನ್ನಮ್ಮ ಸಮುದಾಯಗಳು:** ಆತಿಥ್ಯವಾಗಿ ಪರಿವರ್ತಿತ ವರದಾನವಾದ ವಿಶ್ವವ್ಯಾಪಿ ಪರಪ್ರೇಮದೊಂದಿಗೆ ತಮ್ಮನ್ನು ಗುರುತಿಸಿ, ವೈಯುಕ್ತಿಕ ಆಯ್ಕೆಯಿಂದ ಜೀವನಯೋಜನೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿರ್ಧರಿಸಿ ಪಾಲುದಾರರಾಗುವ ಜನರಾಗಿ ಈ ಜೀವನ ಯೋಜನೆಯನ್ನು ಅವರು ನಿಯತಕಾಲಿಕವಾಗಿ ಒಟ್ಟಾಗಿ ವಿಮರ್ಶಿಸುವರು (ಒಟ್ಟಾಗಿ ಜೀವಿಸುವ ಅಥವಾ ತಮ್ಮ ವಸ್ತುಗಳನ್ನು ಹಂಚಿಕೊಳ್ಳುವ ಅವಶ್ಯಕತೆಯಿಲ್ಲ). ಈ ಸಮುದಾಯದ ಸದಸ್ಯರು ತೇಜಸ್ವೀಕೊಂಡಿಗಳನ್ನು ಅಥವಾ ತೇಜಸ್ವೀ ಮತ್ತು ಕಾನೂನು ಕೊಂಡಿಗಳನ್ನು ಹೊಂದಿರಬಹುದು.
- **ಸಂತ ಅನ್ನಮ್ಮನವರ ಪರವಾತ್ಸಲ್ಯ ಭಗಿನಿಯರ ಸಭೆ:** ತಮ್ಮದೇ ಆದ ರಚನೆಯೊಂದಿಗೆ ಧಾರ್ಮಿಕ ಭಗಿನಿಯರನ್ನು ಒಳಗೊಂಡು ರೂಪಿಸಲ್ಪಟ್ಟ ಒಂದು ರಚನೆ.

ಸಂತ ಅನ್ನಮ್ಮ ಕುಟುಂಬದಲ್ಲಿ ಹೊಸ ರೀತಿಯ ಬದ್ಧತೆಗಳ ಉಗಮವಾದಾಗ ಅವುಗಳನ್ನು ವಿವೇಚಿಸಿ, ಸಮಾಲೋಚಿಸಿ, ಪರಸ್ಪರ ಸಹಕಾರ ಮತ್ತು ವರ್ಚಸ್ವೀ ಸಂಬಂಧದೊಂದಿಗೆ ಅವುಗಳನ್ನು ಅನುಮೋದಿಸುವುದು.

# 8.ಸಂಸ್ಥೆ

### 8.1. ರಚನೆ

<u>1. ಸ್ಥಳೀಯ ಹಂತ</u>

- 6 ಅಥವಾ ಅದಕ್ಕಿಂತ ಹೆಚ್ಚು ಸದಸ್ಯರನ್ನೊಳಗೊಂಡ ಸಮುದಾಯಗಳು.
  – ಸಂಯೋಜಕರು: ಒಬ್ಬ ಸಂಯೋಜಕರು ಮತ್ತು ಧರ್ಮಭಗಿನಿ (ಸಾಧ್ಯವಾದಾಗ).

- ಮಾನವ ಬೆಳವಣಿಗೆಯ ಹಂತಗಳ ಪ್ರಕಾರ, ಸದಸ್ಯರು ವಿವಿಧ ಮಟ್ಟದ ಗುಂಪುಗಳಲ್ಲಿ ಭಾಗವಹಿಸುತ್ತಾರೆ: ಮಕ್ಕಳು, ಯುವಜನರು, ವಯಸ್ಕರು ಯಾವುದೇ ವಯಸ್ಸಿನವರಾದರೂ ತಮಗೆ ಸರಿಹೊಂದುವ ಗುಂಪುಗಳಿಗೆ ಸೇರಬಹುದು. ಹಿಂದಿನ ಹಂತಗಳ ಮೂಲಕ ಹೋಗುವ ಅವಶ್ಯಕತೆಯಿಲ್ಲ.

# 7. ಬದ್ಧತೆಯ ಮಾರ್ಗಗಳು

ಸಂತ ಅನ್ನಮ್ಮ ಕುಟುಂಬದ ಸದಸ್ಯರು ತಮ್ಮ ಭಾಗವಹಿಸುವಿಕೆ ಮತ್ತು ತೇಜಸ್ವೀಬದ್ಧತೆಯನ್ನು ಅನೇಕ ರೀತಿಗಳಲ್ಲಿ ಜೀವಿಸಿ ತೋರಿಸಬಹುದು.

- **ಸಂತ ಅನ್ನಮ್ಮ ಕುಟುಂಬದ ಶ್ರೀಸಾಮಾನ್ಯರು:** ಆತಿಥ್ಯವಾಗಿ ಪರಿವರ್ತಿತ ವರದಾನವಾದ ವಿಶ್ವವ್ಯಾಪಿ ಪರಪ್ರೇಮವನ್ನು ಸಂತ ಅನ್ನಮ್ಮ ಕುಟುಂಬದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿ, ಹಂಚಿಕೊಂಡು ಜೀವಿಸಲು ಬದ್ಧರಾದ ಜಾತ್ಯಾತೀತ ವ್ಯಕ್ತಿಗಳು.
- **ಸಂತ ಅನ್ನಮ್ಮ ಕುಟುಂಬದ ಗುಂಪು:** ಆತಿಥ್ಯವಾಗಿ ಪರಿವರ್ತಿತ ವರದಾನವಾದ ವಿಶ್ವವ್ಯಾಪಿ ಪರಪ್ರೇಮದೊಂದಿಗೆ ತಮ್ಮನ್ನು ಗುರುತಿಸಿ, ಸಾಮುದಾಹಿಕ ಹಿತಾಸಕ್ತಿ ಮತ್ತು ಗುರಿಯೊಂದಿಗೆ ಸಭೆ ಸೇರಿ, ಪ್ರಾರ್ಥನೆ, ರಚನೆ, ಸಹೋದರತ್ವ ಮತ್ತು ಬದ್ಧತೆಯಲ್ಲಿ ಪಾಲುದಾರಾದ ಜನರು.



- ವಿಶೇಷ ಆರಾಧನಾ ಕಾಲಗಳಾದ ಆಗಮನ, ಕ್ರಿಸ್ತಜಯಂತಿ, ತಪಸ್ಸು, ಪುನರುತ್ಥಾನ ಮತ್ತು ಪಂಚಾಶತ್ತಮ ಕಾಲಗಳಲ್ಲಿ ನಡೆಯುವ ಸಭೆ, ಪ್ರಾರ್ಥನಾ ಕೂಟಗಳಲ್ಲಿ ಭಾಗವಹಿಸುವುದು.
- ಸರ್ವ ಕ್ರೈಸ್ತರ ಸಮ್ಮೇಳನ ಮತ್ತು ಅಂತರಧರ್ಮೀಯ ಪ್ರಾರ್ಥನಾಕೂಟಗಳಲ್ಲಿ ಭಾಗವಹಿಸುವುದು.

## ರಚನೆ

- ಮಾನವತೆ, ಶುಭಸಂದೇಶ, ಆಧ್ಯಾತ್ಮಿಕತೆ, ಜನಹಿತಸೇವೆ, ಧಾರ್ಮಿಕಸಭೆ, ಕ್ರೈಸ್ತಧರ್ಮ, ವಿವಿಧ ರೀತಿಯ ಸಂಸ್ಕೃತಿ ಮುಂತಾದ ವಿಷಯಗಳ ಅರಿವು ಮತ್ತು ತಿಳುವಳಿಕೆಗಾಗಿ ಕೂಟಗಳು, ಗುಂಪು ಚಟುವಟಿಕೆಗಳು ಮತ್ತು ಸಭೆಗಳು.
- ಕುಟುಂಬ ರಚನಾ ವಿಷಯದ ವಿಸ್ತಾರವಾದ ವಿವರಣೆ.
- ರಚನಾ ಪ್ರಕ್ರಿಯೆಯ ಹೊಂದಾಣಿಕೆ.

## ಸಹೋದರತ್ವ

- ಸ್ಥಳೀಯ, ಪ್ರಾಂತೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಸಭೆಗಳಲ್ಲಿ ಸದಸ್ಯರು ಅಥವಾ ಪ್ರತಿನಿಧಿ ಸದಸ್ಯರು ಭಾಗವಹಿಸುವುದು.
- ಧಾರ್ಮಿಕ ಸಭೆಯು ಆಚರಿಸುವ ಹಬ್ಬಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.

- ಭಿನ್ನ ನಂಬಿಕೆ ಹೊಂದಿದ ಜನರನ್ನು ಗೌರವಿಸಿ, ಅವರ ಸಂಪ್ರದಾಯ, ಧರ್ಮಾಚರಣೆ, ಧಾರ್ಮಿಕ ಸಮಾರಂಭ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸುವುದು.
- ಕ್ರೈಸ್ತ ಧರ್ಮ ಮತ್ತು ಇತರ ಧರ್ಮಗಳ ನಡುವೆ ನಡೆಯುವ ಸಭೆಗಳಲ್ಲಿ ಭಾಗವಹಿಸುವುದು.
- ಕಾರ್ಯಾಗಾರಗಳು
- ಬೇಸಿಗೆಯ ಕೆಲಸ–ಶಿಬಿರಗಳು/ಯುವಜನರ ಶಿಬಿರಗಳು.
- ಶಾಲೆಯ ಹೊರಗೆ ಅಥವ ಶಾಲಾ ಅವಧಿಯ ನಂತರ ಮೌಲ್ಯಶಿಕ್ಷಣ ನೀಡುವ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
- ಮನೋರಂಜನಾ ಚಟುವಟಿಕೆಗಳು
- ಪರಸ್ಪರ ಅರಿಯುವ ಮತ್ತು ಸಂಬಂಧ ಬೆಳೆಸುವುದಕ್ಕಾಗಿ ಸಣ್ಣ ವಿಹಾರ ಕ್ರಿಯೆಗಳು ಮತ್ತು ಸಹಭೋಜನ.
- ಹಳೆಯ ವಿದ್ಯಾರ್ಥಿಗಳ ಸಭೆಗಳು.
- ನಮ್ಮ ಗುರುತನ್ನು ತೋರಿಸುವ ಟೀಶರ್ಟ್, ಕೈಚೀಲ, ಕೀಲಿಕೈ, ಚಿನ್ಹೆ, ಶಿಲೆ, ಗೀತೆ ಇತ್ಯಾದಿಗಳ ತಯಾರಿ ಮತ್ತು ಪ್ರಚಾರ.

# ಬದ್ಧತೆ

- ಧಾರ್ಮಿಕ ಕೆಲಸಗಾರಗಳು
- ಬೇಸಿಗೆ ವೈದ್ಯಕೀಯ ಶಿಬಿರಗಳು
- ಸ್ವಪ್ರೇರಣಾ ಸಹಾಯಕ ಚಟುವಟಿಕೆಗಳು
- ಸಂತ ಅನ್ನಮ್ಮ ಕುಟುಂಬದ ಧಾರ್ಮಿಕ ಕೆಲಸದ ಸ್ವಪ್ರೇರಣಾ ಕೆಲಸಗಳು



- ಜಂಟಿ ದುಡಿಮೆ, ಜಂಟಿ ಸಂಭವಗಳು
- ಆಶ್ರಯ ಮನೆಗಳು
- ಆರೋಗ್ಯ, ಶಿಕ್ಷಣ, ಕೈದಿಗಳ ಸಂಧಿಸುವಿಕೆ, ಧರ್ಮಕೇಂದ್ರ, ಮತ್ತು ದೈವಕರೆಯಿಂದ ಪ್ರೇರಿತವಾದ ಇನ್ನಿತರ ಸೇವಾಕಾರ್ಯಕ್ಷೇತ್ರಗಳಲ್ಲಿ ಸಕ್ರಿಯ ಭಾಗವಹಿಸುವಿಕೆ
- ಸಾಮಾಜಿಕ ಕಾರ್ಯಕ್ರಮಗಳು
- ಬಲಹೀನ ಸಹೋದರ/ಸಹೋದರಿಯರ ಹಿತ ಬಯಸಿ ಕೆಲಸ ನಿರ್ವಹಿಸುವ ಇತರ ಘಟಕಗಳೊಡನೆ ಒಂದಾಗಿ ಸೇವೆ ಮಾಡುವುದು
- ಮಹಿಳಾ ಸಶಕ್ತೀಕರಣ ಮತ್ತು ಉತ್ತೇಜನ
- ಕಷ್ಟ ಜೀವನ ನಡೆಸುವ ಜನರ, ವಿಶೇಷವಾಗಿ ಸಂತ ಅನ್ನಮ್ಮ ಕುಟುಂಬಕ್ಕೆ ಸೇರಿದವರು ಮತ್ತು ಯಾರೂ ನೋಡಿಕೊಳ್ಳಲು ಇಲ್ಲದಂತಹ ನಿರ್ಗತಿಕ ಜನರ ಮನೆಗಳನ್ನು ಸಂಧಿಸುವುದು
- ಪರಿಸರ ಸಂರಕ್ಷಣಾ ಕಾರ್ಯಚಟುವಟಿಕೆಗಳು
- ನಮ್ಮ ವೈಯುಕ್ತಿಕ ಪರಿಸ್ಥಿತಿ, ಕೆಲಸಕಾರ್ಯಗಳ ನಿಮಿತ್ತ ಮೇಲ್ಕಂಡ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಲು ಅಸಾಧ್ಯವಾದರೂ, ಧಾರ್ಮಿಕಸಭೆಯ ವರದಾನವನ್ನು ನಮ್ಮ ದೈನ್ಯಂದಿನ ಕೆಲಸಗಳಲ್ಲಿ ಅಳವಡಿಸಿ ಜೀವಿಸುವುದೇ ಈ ಕುಟುಂಬದಲ್ಲಿ ಭಾಗವಹಿಸುವ ಪ್ರಮುಖ ವಿಧಾನ.